ಶ್ರೀ ಶಿವಾನಂದ ಎಸ್. ಪಾಟೀಲ್ : ಇಲ್ಲ ಸಾರ್. ಇವತ್ತು ಕೊನೆಯ ದಿವಸ. ನೀವು ಇದನ್ನು ಮೂರನೇ ಸಾರಿ ಮುಂದೆ ಹಾಕುತ್ತಿದ್ದೀರಿ. ನಾವು ಉತ್ತರ ಕಾಯುವ ಸಲುವಾಗಿ ನಾವು ಎಲ್ಲ ಕೆಲಸ ಬಿಟ್ಟು ಕುಳಿತಿದ್ದೇವೆ. ಯಾರಾದರೂ ಉತ್ತರ ಕೊಡಲಿ. ಇದ್ದಂತಹ ಸಚಿವರು ನನ್ನ ಪ್ರಶ್ನೆಗೆ ಉತ್ತರ ಕೊಡಲಿ.

ಅಧ್ಯಕ್ಷರು : ಯಾರಾದರೂ ಉತ್ತರ ಕೊಡಿ.

ಶ್ರೀ ಜಗದೀಶ್ ಶೆಟ್ಟರ್ : ಅಧ್ಯಕ್ಷರೆ, ಅವರು ಬಹಳ ಮಹತ್ವದ ಕಾರ್ಯಕ್ರಮಕ್ಕೆ ಹೋಗಿದ್ದಾರೆ.

ಶ್ರೀ ವಾಟಾಳ್‌ನಾಗರಾಜ್ : ನನಗೇ ಖಾತೆ ಕೊಟ್ಟು ಬಿಡಿ, ನಾನೇ ಉತ್ತರ ಬೇಕಾದರೆ ಕೊಟ್ಟು ಬಿಡುತ್ತೇನೆ.

ಅಧ್ಯಕ್ಷರು : ಆಯಿತು ಕೊಡಿ.

ಶ್ರೀ ಶಿವಾನಂದ ಎಸ್. ಪಾಟೀಲ್ : ಸಾರ್ ನೀವೇ ಕೊಡಿ. ನನಗೇನೂ ಅಭ್ಯಂತರ ಇಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಸದನದ ಕಲಾಪದ ಮುಂದೆ ಯಾವುದೇ ಕಾರ್ಯಕ್ರಮ ದೊಡ್ಡದಲ್ಲ. ಸದನ ಕರೆದಾಗ ಅವರು ಇರಲೇ ಬೇಕು. ಏನು ಒಂದು ಮೂರು ವರ್ಷ, ನಾಲ್ಕು ವರ್ಷ ಅದವರ ಹಾಗೆ ಅಲ್ಲ. ಇನ್ನೂ ಐದು ದಿವಸ ಆಗಿಲ್ಲ. ಆಗಲೇ ಮಂತ್ರಿಗಳು ಒಂದು ಕಡೆ, ಅಸೆಂಬ್ಲಿ ಒಂದು ಕಡೆ ಏನು ಇದರ ಅರ್ಥ? ಯಾರೂ ಸೀರಿಯಸ್ ಆಗಿಲ್ಲ. ಬೇರೆಯವರಿಗಾದರೂ ಒಪ್ಪಿಸಿದ್ದಾರೆ ಎಂದರೆ ಅದೂ ಇಲ್ಲ.

ಅಧ್ಯಕ್ಷರು : ಮಾನ್ಯ ಜಗದೀಶ್ ಶೆಟ್ಟರ್ ಅವರೇ, ಸಂಬಂಧಪಟ್ಟ ಇಲಾಖೆಯಿಂದ ತರಿಸಿಕೊಂಡು ಆ ನಂತರ ಹೇಳಿ.

ಶ್ರೀ ಜಗದೀಶ್ ಶೆಟ್ಟರ್ : ಅಯಿತು.

ಶ್ರೀ ಶಿವಾನಂದ ಎಸ್. ಪಾಟೀಲ್ : ಇವತ್ತೇ ಕೊನೆಯ ದಿವಸ ಸಾರ್.

ಅಧ್ಯಕ್ಷರು : ಅಷ್ಟರಲ್ಲಿ ನಿಮಗೆ ಉತ್ತರವನ್ನು ತರಿಸಿ ಕೊಡಿಸುತ್ತೇನೆ.

ಶ್ರೀ ಶಿವಾನಂದ ಎಸ್. ಪಾಟೀಲ್ : ಆಯಿತು ಸಾರ್.

ಗ್ರಾಮಸ್ಥರಿಗೆ ಕುಡಿಯುವ ನೀರನ್ನು ಒದಗಿಸುವುದು

107 (387) ಶ್ರೀ ಐವಾನ್ ನಿಗ್ಲಿ (ನಾಮಾಂಕಿತ) : ಮಾನ್ಯ ಆಹಾರ, ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ಬಹುತೇಕ ಗ್ರಾಮಗಳನ್ನು ಅಂತರ್ಜಲ ಕಲುಷಿತವಾಗಿರುವುದು ಮತ್ತು ಇದರಿಂದ ಸಾಂಕ್ರಮಿಕ ರೋಗಗಳು ಅಲ್ಲಿನ ವಾಸಸ್ಥರಿಗ ಹರಡುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಇದನ್ನು ತಡೆಗಟ್ಟಿ ಸುರಕ್ಷಿತ/ ಶುದ್ಧೀಕರಿಸಿದ ಕುಡಿಯುವ ನೀರನ್ನು ಸದರಿ ಗ್ರಾಮಗಳಿಗೆ ಒದಗಿಸಲು ಸರ್ಕಾರದ ಮುಂದೆ ಪ್ರಸ್ತಾವನೆಯಿದೆಯೆ;

ಇ) ಹಾಗಿದ್ದಲ್ಲಿ ಸರ್ಕಾರವು ಕೈಗೆತ್ತಿಕೊಂಡಿರುವ ಸದರಿ ಯೋಜನೆಗಳು (ಯೋಜನೆಗಳ ವಿವರ ಒದಗಿಸುವುದು)?

ಶ್ರೀ ಗೋವಿಂದ ಎಂ. ಕಾರಜೋಳ (ಆಹಾರ, ನಾಗರೀಕ ಸರಬರಾಜು ಸಚಿವರು)

ಅ) ಬಂದಿದೆ.

ಆ) ಹೌದು.

ಇ) ಶುದ್ಧ ಕುಡಿಯುವ ನೀರು ಪೂರೈಕೆಮಾಡಲು ಭೂಮಿಯ ಮೇಲ್ಮೈ ಜಲಮೂಲಗಳನ್ನು ಆಧರಿಸಿ ಸಬ್-ಮಿಷನ್ ಕಾರ್ಯಕ್ರಮದಡಿ 46 ಯೋಜನೆಗಳನ್ನು ಮಂಜೂರು ಮಾಡಲಾಗಿದ್ದು, 29 ಪೂರ್ಣಗೊಂಡಿವೆ ಹಾಗೂ ಉಳಿದ 17 ಪ್ರಗತಿಯಲ್ಲಿವೆ. ಮಾರ್ಚ್ 2006 ರಲ್ಲಿ 170 ಗ್ರಾಮಗಳನ್ನೊಳಗೊಂಡ ರೂ. 71 ಕೋಟಿ ಅಂದಾಜು 27 ಯೋಜನೆಗಳಿಗೆ ಮಂಜೂರಾತಿ ನೀಡಿದೆ. ಸಚೇತನ ಯೋಜನೆಯಡಿಯಲ್ಲಿ ರೂ. 14.50 ಕೋಟಿ ವೆಚ್ಚದಲ್ಲಿ ಫ್ಲೋರೈಡ್ ಬಾಧಿತ 60 ಗ್ರಾಮಗಳಲ್ಲಿ ಸಮುದಾಯದ ಸಹಭಾಗಿತ್ವದೊಂದಿಗೆ ಮನೆ ಮೇಲ್ಛಾವಣಿ ನೀರು ಸಂಗ್ರಹಣೆ ಹಾಗೂ ಭೂಮಿಯ ಮೇಲೆ ಹರಿದು ಹೋಗುವ ಮಳೆ ನೀರು ಸಂಗ್ರಹಣೆ ಮಾಡಿ, ಸುರಕ್ಷಿತ ನೀರುಪೂರೈಸುವ ವ್ಯವಸ್ಥೆಗಾಗಿ ಅನುಮೋದನೆ ನೀಡಲಾಗಿದೆ. ಜೊತೆಗೆ 200 ಡೀಫ್ಲೋರಿಡೇಷನ್ ಘಟಕಗಳ ಸ್ಥಾಪನೆ ಮತ್ತು 50,000 ಗೃಹೋಪಯೋಗಿ ಡಿಎಫ್ ಪಿಲ್ಟರ್‌ಗಳ ಪೂರೈಕೆ, ಮನೆಯ ಮೇಲ್ಛಾವಣಿ ಮೇಲೆ ಬೀಳುವ ಮಳೆ ನೀರಿನ ಸಂಗ್ರಹಣೆ ಮತ್ತು ಭೂಮಿ ಮೇಲೆ ಹರಿದು ಹೋಗುವ ನೀರನ್ನು ಹಿಂಗಿಸುವಂತಹ ಕಾಮಗಾರಿಗಳಿಗೆ ಮಳೆ ನೀರಿನ ಕೊಯ್ಲು ಅಂದೋಲನದಡಿ ಆದ್ಯತೆ ನೀಡಲಾಗುತ್ತಿದೆ. ಭಾರತ ನಿರ್ಮಾಣ ಕಾರ್ಯಕ್ರಮದಡಿ ಮುಂದಿನ ಮೂರು ವರ್ಷಗಳಲ್ಲಿ ನೀರಿನ ಗುಣಮಟ್ಟದ ಸಮಸ್ಯೆಗಳಿಗಳೊಳಗಾಗಿರುವ ಗ್ರಾಮಗಳಿಗೆ ಶುದ್ಧ ಕುಡಿಯುವ ನೀರನ್ನು ಒದಗಿಸಲು ಕ್ರಮ ತೆಗೆದುಕೊಳ್ಳಲಾಗುವುದು. 23683 ಗ್ರಾಮೀಣ ಶಾಲೆಗಳು ಮತ್ತು 23520 ಮನೆಗಳಿಗೆ ಮಳೆ ನೀರು ಕೊಯ್ಲು ಆಂದೋಲನದಡಿ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲು ರೂ. 41.76 ಕೋಟಿ ಪಂ.ರಾಜ್ ಸಂಸ್ಥೆಗಳಿಗೆ ಬಿಡುಗಡೆ ಮಾಡಿದೆ.

ಶ್ರೀ ಐವಾನ್ ನಿಗ್ಲಿ : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಇದು ನನಗೆ ಅರ್ಥವಾಗುತ್ತಿಲ್ಲ. ನನ್ನ ಪ್ರಶ್ನೆ : Whether the Government is aware that in most of the places in villages, even the ground water is polluted? ಅದಕ್ಕೆ ಉತ್ತರ "ಹೌದು" ಎಂದು ಕೊಟ್ಟಿದ್ದಾರೆ. ಮತ್ತೆ What solution have you got? ಎಂದು ನಾನು ಕೇಳಿದೆ. ಪ್ಯೂರಿಫೈ ಡ್ರಿಂಕಿಂಗ್ ವಾಟರನ್ನು ಕೊಡುವುದಕ್ಕೆ. ಅದಕ್ಕೆ ಅವರು ಉತ್ತರವನ್ನು ಕೊಟ್ಟಿದ್ದಾರೆ. For providing safe drinking water, they have 46 schemes. 46 ಸ್ಕೀಮುಗಳಿಗೆ 71 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ I don't understand, why you want to spend Rs. 71 crore

for these 46 programmes. That means each programme costs more than Rs. 1 crore 54 lakh,. whereas there are many other systems like UV system -ultra violet system where you can reduce the amount to give purified drinking water to the villages. ಇನ್ನೊಂದು ಇದರಲ್ಲಿ ಕೊಟ್ಟಿದ್ದಾರೆ. "Water harvesting with community participation, such as roof top water and surface water." I just can't understand how they can purify roof top water and surface water. There are only two methods. One is reverse osmosis system which we are using there in the town i.e., reverse osmosis system. The other one is very expensive, there is a new system which has come. It is called ultra-violet system. ಇದರಲ್ಲಿ ಏನಾಗುತ್ತೆ ಎಂದರೆ, there are two methods of filtering water and it is very cheap. For example, 400 ಮನೆಗಳು ಇರುವ ಊರಿನಲ್ಲಿ ಸುಮಾರು 10 ರಿಂದ 12 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದರೆ ಪ್ರತಿಯೊಬ್ಬರಿಗೂ 15 ಲೀಟರ್‌ಗೆ ಒಂದು ರೂಪಾಯಿಗೆ ನಾವು ಕೊಡಬಹುದು. ಇದನ್ನು ಬಿಟ್ಟು ಒಂದೂವರೆ ಕೋಟಿ ರೂಪಾಯಿಗಳನ್ನು ಏಕೆ ಖರ್ಚು ಮಾಡಬೇಕು? ಅದೊಂದು ಪ್ರಶ್ನೆ. ಇನ್ನೊಂದು ಈ ಅಲ್ಟ್ರಾ ವಯಲೆಟ್ ಸಿಸ್ಟಂನಿಂದ ಖರ್ಚೇನೂ ಕಡಿಮೆಯಾಗುತ್ತದೆ. ನಾನು ಆಂಧ್ರ ಸ್ಟೇಟ್‌ನಲ್ಲಿ I had been to one place called Krishna District. I visited a plant like this where they are using the same method for the villages. They are giving water for 400 families, there. For each family 15 litres of water is being supplied for just Re. 1/-. ಒಂದು ರೂಪಾಯಿಗೆ 15 ಲೀಟರ್ ನೀರನ್ನು ಅಲ್ಲಿ ಕೊಡುತ್ತಿದ್ದಾರೆ.

ಅಧ್ಯಕ್ಷರು : ಏನ್ರೀ, ಭಾಷಣ ಮಾಡುತ್ತಿದ್ದೀರೇನ್ರಿ. ಪ್ರಶ್ನೆ ಕೇಳಿ ಎಂದರೆ ಭಾಷಣ ಮಾಡುತ್ತಿದ್ದೀರಲ್ಲಾ.

ಶ್ರೀ ಐವಾನ್ ನಿಗ್ಲಿ : ಪ್ರಶ್ನೇನೆ ನಾನು ಕೇಳುತ್ತಿರುವುದು. ಈ 71 ಕೋಟಿ ರೂಪಾಯಿಗಳನ್ನು ಏಕೆ ಖರ್ಚು ಮಾಡಬೇಕು? 10 ರಿಂದ 12 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದರೆ ಪ್ರತಿಯೊಂದು ವಿಲೇಜ್‌ನಲ್ಲಿ ಈ ಸಿಸ್ಟಂ ಮುಖಾಂತರ ಪ್ಯೂರಿಫೈ ಡ್ರಿಂಕಿಂಗ್ ವಾಟರ್‌ನ್ನು ಕೊಡಬಹುದು. ನಾವು ಖರ್ಚು ಮಾಡುವ 10 ರಿಂದ 12 ಲಕ್ಷ ರೂಪಾಯಿಗಳೇನು ಇದೆ, ಅಷ್ಟು ಖರ್ಚು ಮಾಡಿದರೆ ಆ ಊರಿನಲ್ಲಿ ಉದಾ: ಗೆ ನಾನೊಂದು ವಿಲೇಜ್ ಬಗ್ಗೆ ಹೇಳುತ್ತೇನೆ. ಮಾರಿಕುಪ್ಪಂ ಎಂದು ಒಂದು ವಿಲೇಜ್ ಇದೆ. ಆ ವಿಲೇಜ್‌ಗೆ ನೀರು ಗೌರ್ನಮೆಂಟ್ ಡಿಪಾರ್ಟ್‌ಮೆಂಟ್ ಆಫ್ ಮೈನ್ಸ್ ಅಂಡ್ ಜಿಯಾಲಜಿ ಅವರ ಕಡೆಯಿಂದ ಎಕ್ಸಾಮಿನ್ ಮಾಡಿ ರಿಪೋರ್ಟ್‌ನ್ನು ಕೊಟ್ಟಿದ್ದಾರೆ.

'This water is not good for drinking.' ಎಂದು ಕೊಟ್ಟಿದ್ದಾರೆ. ಅದೇ ನೀರನ್ನು ಅವರು ಕುಡಿಯುತ್ತಿದ್ದಾರೆ. ಅದರಿಂದೇನಾಗುತ್ತದೆ ಎಂದರೆ ಖಾಯಿಲೆ ಬರುತ್ತದೆ. ಯಾವ ರೀತಿಯ ಖಾಯಿಲೆ ಎಂದರೆ ಮಲೇರಿಯಾ ಈ ರೀತಿ ಖಾಯಿಲೆಯೆಲ್ಲಾ ಬರುತ್ತದೆ. ಆಗ ಏನಾಗುತ್ತದೆ ಎಂದರೆ ಸರ್ಕಾರದಿಂದ ಜಾಸ್ತಿ ಹಣವನ್ನು ಖರ್ಚು ಮಾಡಬೇಕಾಗುತ್ತದೆ. ನಾಳೆ ಅವರಿಗೆ ಹಾಸ್ಪಿಟಲೈಜೇಷನ್‌ಗೊ ಮೆಡಿಸಿನ್‌ಗೋ ಹಣವನ್ನು ಖರ್ಚು ಮಾಡಬೇಕು. Suppose we implement this UV system in all villages, we can reduce diseases like this. ಈ ಕಡೆಗೆ ನಾವು ಹಣವನ್ನು ಖರ್ಚು ಮಾಡಿದರೆ ಆ ಕಡೆ ನಮಗೆ ಲಾಭವಾಗುತ್ತದೆ. ಅದೂ ಅಲ್ಲದೇ ಪ್ರತಿಯೊಂದು ಊರಿನಲ್ಲಿ ಕರ್ನಾಟಕ ರಾಜ್ಯದಲ್ಲಿ ಪ್ರತಿಯೊಂದು ಊರಿನಲ್ಲಿ ಪ್ಯೂರಿಫೈ ಡ್ರಿಂಕಿಂಗ್ ವಾಟರನ್ನು ಕೊಡಬಹುದು. ಇದಕ್ಕೆ ಆ ಊರಿನವರು ಸಿದ್ದವಾಗಿದ್ದಾರೆ. ಹತ್ತು ಪರ್‌ಸೆಂಟ್ ಅವರು ಕ್ರಾಂಟ್ರಿಬ್ಯೂಟ್ ಮಾಡುತ್ತೇವೆಂದು ಹೇಳಿದ್ದಾರೆ. 20 ಪರ್‌ಸೆಂಟ್ ಎಂಎಲ್‌ಎ ಫಂಡ್‌ನಿಂದ ನಾನು ಕೊಡುವುದಕ್ಕೆ ಸಿದ್ದನಾಗಿದ್ದೇನೆ. ಪ್ರತಿಯೊಂದು ಡಿಸ್ಟ್ರಿಕ್ಟ್‌ನಲ್ಲಿ ನಾಲ್ಕೈದು ವಿಲೇಜ್‌ಗೆ ಕೊಡುವುದಕ್ಕೆ ನಾನು ಸಿದ್ದನಾಗಿದ್ದೇನೆ. ಬಾಕಿ ಹಣವನ್ನು ಸರ್ಕಾರ ಖರ್ಚುಮಾಡಿದರೆ ಸಾಕು. ಪ್ರತಿಯೊಂದು ಊರಿಗೂ ಒಂದೂವರೆ ಕೋಟಿ ರೂಪಾಯಿಗಳನ್ನು ಏಕೆ ಖರ್ಚು ಮಾಡಬೇಕು. ಇಷ್ಟೇ ನನ್ನ ಪ್ರಶ್ನೆ.

ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗಳಿಗೆ ಉತ್ತರವನ್ನು ಕೊಟ್ಟಿದ್ದೇನೆ. ಅವರು 71 ಕೋಟಿ ರೂಪಾಯಿಗಳನ್ನು ಏಕೆ ಖರ್ಚು ಮಾಡಿದಿರಿ 46 ಹಳ್ಳಿಗಳಿಗೆ ಎನ್ನುವ ಪ್ರಶ್ನೆಯನ್ನು ಕೇಳಿದರು. ಮಾನ್ಯ ಅಧ್ಯಕ್ಷರೇ, ಕೆಲವು ಗ್ರಾಮಗಳಲ್ಲಿ, ಕೆಲವು ತಾಲ್ಲೂಕುಗಳಲ್ಲಿ ಈ ಫ್ಲೋರೈಡ್ ನೀರಿನ ಸಮಸ್ಯೆ ಇರುವುದರಿಂದ ಗ್ರೌಂಡ್ ವಾಟರ್‌ನ್ನು ಯೂಸ್ ಮಾಡುವುದರ ಬದಲಾಗಿ ಸರ್ಫೇಸ್ ವಾಟರನ್ನು ಯೂಸ್ ಮಾಡಿ ನಾವು ಸ್ಕೀಮುಗಳನ್ನು ಮಾಡುತ್ತಿದ್ದೇವೆ. ಆ ಕಾರಣಕ್ಕಾಗಿ ಇವತ್ತು 46 ಸ್ಕೀಮುಗಳಿಗೆ 138 ಕೋಟಿ ರೂಪಾಯಿಗಳ ಯೋಜನೆಯನ್ನು ತಯಾರಿಸಿದ್ದೇವೆ. ಮಾರ್ಚ್ 2006 ರವರೆಗೂ 177 ಹಳ್ಳಿಗಳಿಗೆ 27 ಸ್ಕೀಮುಗಳಿಗೆ 71 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಮತ್ತು ಇಲ್ಲಿ ಮಾನ್ಯ ಸದಸ್ಯರು ಹೇಳಿದ ಹಾಗೆ ಫಿಲ್ಟರ್ ಮಾಡಿ ನೀರನ್ನು ಕೊಡಬಹುದೆಂದು ಹೇಳಿದರು. ಯಾವ ಮೂಲದಿಂದ ನೀರನ್ನು ತರಲಿಕ್ಕೆ ಸಾಧ್ಯ ಇದೆ? ನೀರನ್ನು ತರಬೇಕಾದರೆ ನದಿ ಬೇಕು, ಇಲ್ಲ ಕೆರೆ ಬೇಕು, ಮತ್ತು ಹಳ್ಳ ಬೇಕು. ಸರ್ಫೇಸ್ ವಾಟರನ್ನು ಎಲ್ಲಿಂದ ತರಬೇಕು? ಗ್ರೌಂಡ್ ವಾಟರ್‌ನಿಂದ ಈ ಸಮಸ್ಯೆ ಬಗೆಹರಿಯುವುದಿಲ್ಲ. ಗ್ರೌಂಡ್ ವಾಟರ್‌ನಿಂದ ಫ್ಲೋರೈಡ್ ಸಮಸ್ಯೆ ಇದೆ. ಆ ಕಾರಣಕ್ಕಾಗಿ ಈ ಯೋಜನೆಗಳನ್ನು ತೆಗೆದುಕೊಂಡಿದ್ದೇವೆಂದು ಹೇಳಿ ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಬಯಸುತ್ತೇನೆ. ಇನ್ನೊಂದು ವಿಷಯವನ್ನು ತಾವು ಹೇಳಿದಿರಿ. ತಮ್ಮ ಎಂಎಲ್‌ಎ ಗ್ರಾಂಟ್‌ನಿಂದಲೂ ಹಣವನ್ನು ಕೊಡುತ್ತೇವೆಂದು

ಹೇಳಿ. ಕೇಂದ್ರ ಸರ್ಕಾರದ ಯೋಜನೆಗಳಲ್ಲಿ ಸಮುದಾಯದ ಕಾಂಟ್ರಿಬ್ಯೂಷನ್ ಬೇಕಾಗುತ್ತದೆ. ತಾವು ಕೊಡತಕ್ಕಂಥದ್ದು ಆಗುವುದಿಲ್ಲ. ಸಮುದಾಯ ಕೂಡ ಕಾಂಟ್ರಿಬ್ಯೂಷನನ್ನು ಮಾಡಬೇಕಾಗುತ್ತದೆ. ಸಮುದಾಯ ಕಾಂಟ್ರಿಬ್ಯೂಷನನ್ನು ಮಾಡುವುದಕ್ಕೆ ಯಾವ ಊರಿನಲ್ಲಿ ಸಿದ್ದವಿಲ್ಲ. ಆ ಊರಿನಲ್ಲಿ ಬೇರೆ ಮೂಲದಿಂದ ನಮ್ಮಲ್ಲಿ ಇರತಕ್ಕ ಯೋಜನೆಗಳಲ್ಲಿ ನೀರಿನ ವ್ಯವಸ್ಥೆಯನ್ನು ಮಾಡಿಕೊಡುತ್ತೇವೆ. ದಯಮಾಡಿ ತಾವು ಅಂಥ ಸಮಸ್ಯೆಗಳು ಇದ್ದರೆ ನಿರ್ದಿಷ್ಟ ಊರುಗಳು ಯಾವುದಾದರೂ ಇದ್ದರೆ ನನಗೆ ಕಳುಹಿಸಿಕೊಡಬೇಕೆಂದು ಹೇಳಿ ತಮ್ಮ ಮೂಲಕ ನಾನು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಐವಾನ್ ನಿಗ್ಲಿ : ಮಾನ್ಯ ಅಧ್ಯಕ್ಷರೆ, ಈಗ ನಾನು ಕೆ.ಜಿ.ಎಫ್. ಬಗ್ಗೆ ಹೇಳಿದೆ. ಮಾರಿಕುಪ್ಪಂ ಎಂದು ಒಂದು ಸಣ್ಣ ಊರಿದೆ. ಅಲ್ಲಿ ಸರ್ಫೇಸ್ ವಾಟರ್ 365 ಡೇಸ್ ಕೂಡ ಅಲ್ಲಿ ಅವೈಲಬಿಲಿಟಿ ಇದೆ. ಅದರ ಹೆಸರು ಶಿವಸಾಗರ ಟ್ಯಾಂಕ್ ಎಂದು. ಪೈಲಟ್‌ಪ್ರಾಜೆಕ್ಟ್ ಆಗಿ why can't we implement one scheme and see whether it is profitable for the Government and for the public? ಪೈಲಟ್ ಪ್ರಾಜೆಕ್ಟ್ ಆಗಿ ಇಂಪ್ಲಿಮೆಂಟ್ ಮಾಡಿದರೆ ಅನುಕೂಲವಾಗುತ್ತದೆ. ಆ ಊರಿನಲ್ಲಿ ಎಷ್ಟು ಹಣ ಖರ್ಚಾಗುತ್ತದೋ ಅದರಲ್ಲಿ ಹತ್ತು ಪರ್‌ಸೆಂಟ್ ಹಣವನ್ನು ಆ ಗ್ರಾಮ ಪಂಚಾಯಿತಿಯವರು ಕೊಡುವುದಕ್ಕೆ ಸಿದ್ದ ಇದ್ದಾರೆ. ಅದರ ಬಗ್ಗೆ ನನ್ನ ಹತ್ತಿರ ಲೆಟರ್ ಕೂಡ ಇದೆ. ನಾನು ಮಾನ್ಯ ಮಂತ್ರಿಗಳಿಗೆ ಒಂದು ಲೆಟರನ್ನು ಕಳುಹಿಸಿದ್ದೇವೆ. ಮಾನ್ಯ ಮಂತ್ರಿಯವರು ಕೂಡ ನನಗೆ ರಿಪ್ಲೈಯನ್ನು ಕೊಟ್ಟಿದ್ದಾರೆ. "I really appreciate your concern and efforts in providing drinking water to Marikuppam." He has already appreciated my programme. But, I just want to request the Hon'ble Minister that let us start one - at least one project in a particular area, where the water is polluted i.e., Marikuppam area. ಆ ನಂತರ ಆ ಸ್ಕೀಮ್ ಸಕ್ಸಸ್‌ಫುಲ್ ಆದರೆ ಬೇರೆ ಎಲ್ಲಾ ಕಡೆಯಲ್ಲೂ ನಾವು ಇದನ್ನು ಇಂಪ್ಲಿಮೆಂಟ್ ಮಾಡಬಹುದಲ್ಲವೇ?

ಶ್ರೀ ಗೋವಿಂದ ಎಂ. ಕಾರಜೋಳ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಸಲಹೆಯನ್ನು ಪರಿಗಣಿಸಲಾಗಿದೆ. ಮತ್ತು ಸಂಬಂಧಪಟ್ಟ ಅಧಿಕಾರಿಗಳಿಗೆ ಯೋಜನಾ ವರದಿಯನ್ನು ತಯಾರು ಮಾಡುವುದಕ್ಕೆ ಸೂಚನೆಯನ್ನು ಕೊಟ್ಟಿದ್ದೇನೆ. ಯೋಜನೆ ಫೀಸಿಬಲ್ ಆಗುವ ಹಾಗೆ ಇದ್ದರೆ ಖಂಡಿತವಾಗಿಯೂ ಮಾಡಿಕೊಡುತ್ತೇನೆ.

ಅಧ್ಯಕ್ಷರು ; ಈಗ ಸರಿಕಾರ್ ಭೀಮಪ್ಪ ಚನ್ನಪ್ಪ. ಈಗ ಇವರ ಪ್ರಶ್ನೆಗೆ ಒಂದು ವಾರ ಕಾಲಾವಕಾಶವನ್ನು ಕೋರಿರುತ್ತಾರೆ. ಇನ್ನೊಂದು ಮಾನ್ಯ ಅರಗ ಜ್ಞಾನೇಂದ್ರ ಅವರ ಪ್ರಶ್ನೆಗೂ ಮಾನ್ಯ ಮಂತ್ರಿಗಳು ಒಂದು ವಾರ ಕಾಲಾವಕಾಶವನ್ನು ಕೋರಿದ್ದಾರೆ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆ ಬಹಳ ಸುಲಭದ್ದು ಇದೆ. ಅವರು ಒಂದು ವಾರ ತೆಗೆದುಕೊಳ್ಳುವುದೇನೂ ಇಲ್ಲ. ನನ್ನ ಕ್ಷೇತ್ರದ ಮುಡಬಾ ಎಂದು